KAKB420005562020

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ.

## ಸಿ.ಸಿ.ನಂ.313೫2020

**ಫಿರ್ಯಾದಿ:** ಚಿಂಚೋಳಿ ಪೊಲೀಸ್ ಠಾಣೆ. ವಿರುದ್ಧ **ಆರೋಪಿಃ**

ವಿಜಯಕುಮಾರ ತಂದೆ ರಾಮಣ್ಣಾ ಸುಂಠಾಣ, 23 ವರ್ಷ, ಉಃ ಆಟೋ ಚಾಲಕ, ವಾಸಃ ನರನಾಳ ಗ್ರಾಮ, ಚಿಂಚೋಳಿ ತಾಲ್ಲೂಕ್, ಕಲಬುರಗಿ ಜಿಲ್ಲೆ.

## ಃಆರೋಪಣೆಃ

ದಿನಾಂಕಃ 12-05-2019 ರಂದು ಸಂಜೆ 5-30 ಗಂಟೆ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ನರನಾಳ ಗ್ರಾಮದಿಂದ ಚಿಮ್ಮನಚೋಡ ಗ್ರಾಮಕ್ಕೆ ಹೋಗುವುದಕ್ಕಾಗಿ ಚಾಸಾ-10 ರಿಂದ 13 ರವರು ಹಾಗೂ ಬಾಬುರಾವ ತಂದೆ ಶಿವಪ್ಪಾ ಪಾಟೀಲ ನರನಾಳ ಗ್ರಾಮ ಇವರು ಕೆಎ-32-ಸಿ-1127 ರ ಆಟೋದಲ್ಲಿ ಕುಳಿತು ನರನಾಳ ಗ್ರಾಮಂದಿದ ಚಿಮ್ಮನಚೋಡ ಗ್ರಾಮದ ಕಡೆಗೆ ಹೊರಟಿದ್ದು, ರೋಹಿಲ್ಯಾ ತಾಂಡಾದ ಕ್ರಾಸ್ ರಸ್ತೆಯ ಸಮೀಪ ನರನಾಳದಿಂದ ಕನಕಪುರ ಕಡೆಗೆ ಬರುವ ರಸ್ತೆಯಲ್ಲಿ ಹೊರಟಾಗ ಆರೋಪಿಯಾದ ನೀನು ಕೆಎ-32-ಸಿ-1127 ನೇ ನಂಬರಿನ ಆಟೋವನ್ನು ಮಾನವ ಪ್ರಾಣಕ್ಕೆ ಅಪಾಯ ಉಂಟು ಮಾಡುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಚಾಲನೆಯಲ್ಲಿ ನಿಯಂತ್ರಣ ತಪ್ಪಿ, ನೀನು ಭಾ.ದಂ.ಸಂ.ಕಲಂ. 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀಯ.

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನಿನ್ನ ಬಾಬ್ತು ಕೆಎ-32-ಸಿ-1127 ರ ಆಟೋವನ್ನು ಚಾಲನೆಯಲ್ಲಿ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗಕ್ಕೆ ತೆಗ್ಗಿನಲ್ಲಿ ಮುಳ್ಳುಕಂಟಿಗಳಲ್ಲಿ ಹೋಗಿ ಪಲ್ಟಿಯಾಗಿ ಬಿದ್ದ ಪರಿಣಾಮ ನಿನ್ನ ಆಟೊದಲ್ಲಿ ಕುಳಿತಿದ್ದ ಚಾಸಾ-11 ರವರಿಗೆ ಸಾದಾ

ಸ್ವರೂಪದ ಗಾಯವನ್ನುಂಟು ಮಾಡಿದ್ದರಿಂದ ನೀನು ಭಾ.ದಂ.ಸಂ.ಕಲಂ. 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀಯ.

3. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನಿನ್ನ ಬಾಬ್ತು ಕೆಎ-32-ಸಿ-1127 ರ ಆಟೋವನ್ನು ಚಾಲನೆಯಲ್ಲಿ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗಕ್ಕೆ ತೆಗ್ಗಿನಲ್ಲಿ ಮುಳ್ಳುಕಂಟಿಗಳಲ್ಲಿ ಹೋಗಿ ಪಲ್ಟಿಯಾಗಿ ಬಿದ್ದ ಪರಿಣಾಮ ನಿನ್ನ ಆಟೊದಲ್ಲಿ ಕುಳಿತಿದ್ದ ಚಾಸಾ-10, 12 ಮತ್ತು 13 ರವರಿಗೆ ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದರಿಂದ ನೀನು ಭಾ.ದಂ.ಸಂ.ಕಲಂ. 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀಯ.

4. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀನು ನಿನ್ನ ಬಾಬ್ತು ಕೆಎ-32-ಸಿ-1127ನೇ ನಂಬರಿನ ಆಟೋವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಲನೆಯಲ್ಲಿ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗಕ್ಕೆ ತೆಗ್ಗಿನಲ್ಲಿ ಮುಳ್ಳುಕಂಟಿಗಳಲ್ಲಿ ಹೋಗಿ ಪಲ್ಟಿಯಾಗಿ ಬಿದ್ದ ಪರಿಣಾಮ ಬಾಬುರಾವ ತಂದೆ ಶಿವಪ್ಪಾ ಪಾಟೀಲರವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದರಿಂದ ಇವರಿಗೆ ಉಪಚಾರಕ್ಕಾಗಿ ಕಲಬುರಗಿಯ ಕಾಮರೆಡ್ಡಿ ಖಾಸಗಿ ಆಸ್ಪತ್ರೆಯಲ್ಲಿ ಸೇರಿಕೆ ಮಾಡಿದಾಗ ದಿನಾಂಕಃ 12-05-2019 ರಂದು ರಾತ್ರಿ 9-30 ಗಂಟೆಯ ಸುಮಾರಿಗೆ ಮೃತಪಟ್ಟಿದ್ದರಿಂದ ನೀನು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀಯ.

5. ಈ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು ಆರೋಪಿಯಾದ ನೀನು ನಿನ್ನ ಬಾಬ್ತು ಕೆಎ-32-ಸಿ-1127ನೇ ನಂಬರಿನ ಆಟೋವನ್ನು ಅಪಘಾತಪಡಿಸಿದ ಬಗ್ಗೆ ಸಂಬಂಧಪಟ್ಟ ಪೋಲಿಸ್ ಠಾಣೆಗೆ ಮಾಹಿತಿ ನೀಡದೆ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ ಕಾರಣ, ಈ ಮೂಲಕ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀಯಾ ಎಂದು ಆಪಾದನೆ.

## -: ಆರೋಪಿತನ ಹೇಳಿಕೆ:-

***ಪ್ರಶ್ನೆ: 1 ಈಗ ಓದಿ ಹೇಳಿದ ನಿಮ್ಮ ಮೇಲಿನ ಆರೋಪಣೆ ಅರ್ಥವಾಯಿತೇ?***

***ಉತ್ತರ:***

***ಪ್ರಶ್ನೆ: 2 ನಿಮ್ಮ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೇ?***

***ಉತ್ತರ:***

(ಮೇಲೆ ನಮೂದು ಮಾಡಿದ ಆರೋಪಿತನ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿತನು ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

ದಿನಾಂಕ:21-08-2021.

*(ಶ್ರೀ ರವಿಕುಮಾರ ವಿ.)*
ಪ್ರಧಾನ *ಪ್ರ.ದ.ನ್ಯಾ.ದಂಡಾಧಿಕಾರಿ,*
*ಚಿಂಚೋಳಿ.*